"ಹಂಗೇನಿಲ್ಲ" ಎಂದು ಗೊಗ್ಗರ ದನಿಯ ದಢೂತಿ ಮನುಷ್ಯ ಹೇಳಿದ, "ಸುರೇಶಣ್ಣಾರು ನಿನ್ನ ಕರಕೊಂಡು ಬರಾಕ ಹೇಳ್ಯಾರ ನಡಿ."

"ಎಲ್ಲಿಗ್ರೀ?" ಫಕೀರ ಗಾಬರಿಯಿಂದ ಕೇಳಿದ.

"ಸುರೇಶಣ್ಣಾರು ಬೆಂಗಳೂರಿನಾಗ ಅದಾರ, ಅವರು ನಿನ್ನ ಭೆಟ್ಟಿ ಆಗಬೇಕಂತ ನಡಿ. ನಿನ್ನ ಅರಿವಿ ಗಿರವಿ ಒಂದು ಗಂಟು ಕಟ್ಟು" ಗೊಗ್ಗರು ದನಿಯ ದಢೂತಿ ಆಸಾಮಿ ಬೆದರಿಸುವಂತೆ ಹೇಳಿದ.

"ನಡಿಪಾ ನಡಿ" ಎಂದು ಉಳಿದವರೂ ದನಿಗೂಡಿಸಿದರು.

ಫಕೀರನಿಗೆ ಏನು ಮಾಡಬೇಕೆಂದು ತಕ್ಷಣ ಹೊಳೆಯಲಿಲ್ಲ. ಸುತ್ತಲೂ ನೋಡಿದ. ತನ್ನ ಹಳ್ಳಿಯ ಜನರಾರೂ ಕಾಣಲಿಲ್ಲ.

"ಊರಾಗ ಯಾರಿಗರ ಹೇಳಿ ಬರ್ತೇನ್ರಿ. ಮತ್ತ ನಾ ಬಿಟ್ಟು ಹ್ವಾದ್ರ ಈ ಮನಿ ನೋಡಿಕೊಳ್ಳಾಕ ಯಾರರ ಬೇಕಲ್ರಿ?"

"ನಾವು ಊರಾಗಿನ ಮಂದಿಗೆ ಹೇಳಿ ಬಂದೀವಿ. ನೀನು ಲಗೂನ ರೆಡಿ ಆಗಪಾ" ಮೊದಲಿನ ಆಸಾಮಿ ಸ್ವಲ್ಪ ಒತ್ತಾಯದಿಂದಲೇ ಹೇಳಿದ.

ಫಕೀರನಿಗೆ ಇವರ್‍ಯಾರೊ ದೊಡ್ಡ ಮಂದಿ ತನ್ನ ದಣಿಯ ಕಡೆಯಿಂದಲೇ ಬಂದಿರಬೇಕೆನ್ನಿಸಿ, ತನ್ನ ಒಂದು ಮಾಸಿದ ಧೋತರ ಮತ್ತು ಅಂಗಿಯನ್ನು ಅಷ್ಟೇ ಮಾಸಿದ ಟವಲ್‌ನಲ್ಲಿ ಕಟ್ಟಿದ. "ನಡಿರಿ ಹಂಗಾರ" ಎಂದ.

"ಚಪ್ಪಲಿ?" ಎಂದ ಒಬ್ಬ.

"ನಾ ಚಪ್ಪಲಿ ಮೆಟ್ಟೊದಿಲ್ರಿ. ಆದ್ರ ದಣ್ಯಾರು ಇಲ್ಲಿಂದ ಬಿಟ್ಟು ಹೋಗೊ ಮುಂದ ಬಿಟ್ಟ ಚಪ್ಪಲೀನ ಹಾಕ್ಕೊಂತೇನ್ರಿ ಯಾವಾಗಾರ. ಬಾಳ ದೂಳ ಆಗಿರತಾವರಿ" ಎಂದು ಹೇಳಿ ಕಟ್ಟೆಯ ಕೆಳಗಿನ ಭಾಗದಲ್ಲಿದ್ದ ಚಪ್ಪಲಿ ಗೂಡಿನಿಂದ ಎರಡು ಅತಿ ಹಳೆಯ ಚಪ್ಪಲಿಗಳನ್ನು ಹೊರತೆಗೆದ. ಅವುಗಳನ್ನು ನೆಲಕ್ಕೆ ಅಪ್ಪಳಿಸಿ ದೂಳು ಜಾಡಿಸಿದ. ಅವುಗಳನ್ನು ಮೆಟ್ಟಿ ಕೈಯಲ್ಲಿ ಟವಲ್ ಗಂಟು ಹಿಡಿದು ನಿಂತಿದ್ದ ಫಕೀರ ತಾನು ಯಾವುದೊ ಘನಂದಾರಿ ಕೆಲಸಕ್ಕೆ ಹೊರಟಿರಬಹುದು, ಇಲ್ಲ ಯಾರೊ ಅಪರಿಚಿತರು ದಣಿ ಕಡೆಯಿಂದ ತನಗೆ ಗೊತ್ತಿಲ್ಲದ ನಾಡಿಗೆ ಕರೆದೊಯ್ಯುತ್ತಿರಬಹುದು ಎಂದುಕೊಂಡ. ಆದರೆ ಎಂದೆಂದೂ ಬೇರೆ ಊರಿಗೆ ಹೋಗದಿದ್ದ ಆತನಲ್ಲಿ ಹೊಸ ಹುಮ್ಮಸ್ಸು ಮೂಡಿತ್ತು. ಕಳಕಪ್ಪ ಎಲ್ಲಿಯಾದರೂ ಕಾಣುತ್ತಾನೆಂದು ನೋಡಿದ. ಎಲ್ಲೂ ಕಾಣಲಿಲ್ಲ. ಅಷ್ಟೊಂದು ಒಳ್ಳೆ ಬಟ್ಟೆ ಧರಿಸಿದವರೊಡನೆ ಫಕೀರ ಹೀಗೆ ಹೊರಟಿರುವುದನ್ನು ಕೆಲವು ಹಳ್ಳಿ ಜನರು ನೋಡಿದರು. ಆದರೆ ಆಶ್ಚರ್ಯದಿಂದ ದೂರದಲ್ಲಿ ನಿಂತು ನೋಡಿದರೆ ಹೊರತು ಮಾತನಾಡಲಿಲ್ಲ.

ಒಟ್ಟು ಮೂರು ಕಾರುಗಳು ಹೊರಟವು. ಮಧ್ಯದ ಕಾರಿನಲ್ಲಿ ಫಕೀರ ಇನ್ನಿಬ್ಬರೊಡನೆ ಕುಳಿತಿದ್ದ. ವೇಗ ಜಾಸ್ತಿಯೇ ಇತ್ತು. ಹಳ್ಳಿಗಳು, ಸ್ವಲ್ಪ ದೊಡ್ಡ ಹಳ್ಳಿಗಳು, ಬಸ್ಸುಗಳು, ಏತ ನೀರಾವರಿ ಮಾಡಿಕೊಂಡ ಹಳ್ಳಿಯ ಕೆಲವು ಹಸಿರು ತೋಟಗಳು ಒಂದರ ಹಿಂದೊಂದು ವೇಗದಲ್ಲಿ ಸರಿಯತೊಡಗಿದ್ದವು.

ಹಳ್ಳಿಗಳ, ನಗರಗಳ, ತಾಲ್ಲೂಕುಗಳ ಹೆಸರುಗಳು ಅಲ್ಲಲ್ಲಿ ಕನ್ನಡದಲ್ಲಿ, ಇಂಗ್ಲಿಷಿನಲ್ಲಿ ಕಾಣುತ್ತಿದ್ದವು. ಕನ್ನಡ ಯಾವುದು ಇಂಗ್ಲಿಷ್ ಯಾವುದು ಫಕೀರನಿಗೆ ತಿಳಿಯುತ್ತಿತ್ತು.

"ಎಲ್ಲಿಗೆ ಹೊಂಟೇವ್ರಿ ಸಾಹೇಬರ?" ಎಂದು ಫಕೀರ ಒಮ್ಮೆ ಕೇಳಿದ. ಅದುವರೆಗೆ ಅವನ ಗಮನವೆಲ್ಲ ಕಿಟಕಿಯ ಗಾಜಿನಿಂದ ಹೊರನೋಡುವುದರಲ್ಲಿಯೇ ಹೆರ್ಕಾಗಿತ್ತು.

"ಸುರೇಶಣ್ಣಾರ ನೋಡಾಕ."

"ಎಷ್ಟೊತ್ತಿಗೆ ಮುಟ್ಟತೇವ್ರಿ?"

"ನಾಳೆ ಮುಂಜಾನೆ."